# ಗಾಂಧಿ ಸ್ವದೇಶಿ ಸ್ವಧರ್ಮವೂ

ಗಾಂಧೀಜಿಯವರು ವ್ಯಾವಹಾರಿಕವಾಗಿ ಯಂತ್ರ ಕೇಂದ್ರಿತ ಕೈಗಾರಿಕೆಗಳ ಕುರಿತು ಮತ್ತು ತಾತ್ವಿಕವಾಗಿ ವಿಜ್ಞಾನ–ತಂತ್ರಜ್ಞಾನಗಳ ಕುರಿತು ತಳೆದ ನಿಲುವು ಈಗ ಅನೇಕರಿಗೆ ಇಷ್ಟವಾಗಲಾರದು. ಗಾಂಧಿಯವರ ಕಾಲದಲ್ಲೂ ಇಷ್ಟವಾಗಿರಲಿಲ್ಲ. ಕವೀಂದ್ರ ರವೀಂದ್ರರಿಗೂ ಗಾಂಧೀಜಿಯವರಿಗೂ ಪರಸ್ಪರ ಪ್ರೀತಿ–ಗೌರವಗಳಿದ್ದಾಗಲೂ ಈ ವಿಷಯವೂ ಸೇರಿದಂತೆ ಇಂಥ ಅನೇಕ ವಿಷಯಗಳಲ್ಲಿ ತೀವ್ರ ಅಭಿಪ್ರಾಯ ಭೇದಗಳಿದ್ದುವು. ಅಷ್ಟೇಕೆ; ಸ್ವಾಮೀ ವಿವೇಕಾನಂದರಂಥ ಉನ್ನತ ಆಧ್ಯಾತ್ಮಿಕ ವ್ಯಕ್ತಿಗಳೇ ವಿಜ್ಞಾನವನ್ನು ಸ್ವಾಗತಿಸಿದ್ದರು. ಭಾರತಕ್ಕೆ ಪಶ್ಚಿಮದ ವಿಜ್ಞಾನದ ಅಗತ್ಯ ಇದೆ ಮತ್ತು ಪಶ್ಚಿಮ ದೇಶಗಳಿಗೆ ಭಾರತೀಯ ಅಧ್ಯಾತ್ಮದ ಅಗತ್ಯ ಇದೆ ಎಂದು ವಿವೇಕಾನಂದರು ಹೊಸ ವಿಶ್ವದೃಷ್ಟಿಯೊಂದನ್ನು ಬಲವಾಗಿ ಪ್ರತಿಪಾದಿಸಿದ್ದರು. ಮಾನವನ ಬದುಕು ನಿಸರ್ಗದ ಅನೇಕ ಶಕ್ತಿಗಳ ಸಮನ್ವಯದಿಂದ ರೂಪುಗೊಂಡಿದೆಯಾಗಿ; ಈ ಬದುಕು ಪರಸ್ಪರ ವಿರುದ್ಧವೆಂದು ಕಾಣುವ ಶಕ್ತಿಗಳ ಸಮನ್ವಯದ ಸಾಧನೆಗಾಗಿಯೇ ಇರುವಂಥದು– ಎನ್ನುತ್ತಿದ್ದರು. ಅವರ ಗುರುಗಳಾದ ಶ್ರೀ ರಾಮಕೃಷ್ಣರು ತಮ್ಮ ಬದುಕೆಂಬ ಆಧ್ಯಾತ್ಮಿಕ ಪ್ರಯೋಗಶಾಲೆಯಲ್ಲಿ ಎಲ್ಲ ಧರ್ಮಗಳ ಅತ್ಯಂತಿಕ ಅನುಭವಗಳನ್ನು ಸಮನ್ವಯಗೊಳಿಸಿದ್ದರೆ, ವಿವೇಕಾನಂದರು ಈ ಪರಂಪರೆಯ ಮುಂದುವರಿಕೆಯೆಂಬಂತೆ ವಿಜ್ಞಾನ ಮತ್ತು ಅಧ್ಯಾತ್ಮಗಳು ಸಮನ್ವಯವನ್ನು ಕುರಿತು ಹೇಳುತ್ತಿದ್ದರು. ಆದರೆ ಹೀಗೆ ಪಶ್ಚಿಮದ ವಿಜ್ಞಾನವನ್ನು ಸ್ವಾಗತಿಸುವ ಭರದಲ್ಲಿ ಸಾವಿರಾರು ವರ್ಷಗಳಿಂದ ಈ ನೆಲದಲ್ಲಿ ಬೆಳೆದು ಬಂದ ದೇಶೀಯ ವಿಜ್ಞಾನವನ್ನು ವಿವೇಕಾನಂದರು ಗಣನೆಗೆ ತೆಗೆದುಕೊಳ್ಳದಂತಾಯಿತು ಎಂದು ಧರ್ಮಪಾಲ್ ಮುಂತಾದ ಇತಿಹಾಸಕಾರರು ಹೇಳುತ್ತಾರೆ.

ಅದೇನೇ ಇರಲಿ; ಪ್ರಾಯಃ ಇದನ್ನು ಗುರುತಿಸಿಯೋ ಎಂಬಂತೆ ಈ ದೇಶೀಯ ಅಂಶವನ್ನೇ ಗಾಂಧೀಜಿ ತಮ್ಮ ಅಜೆಂಡಾ ಎಂಬಂತೆ ಎತ್ತಿಕೊಂಡರು. ಇಲ್ಲಿನ ಅಗತ್ಯಗಳಿಗೆ ತಕ್ಕಂತೆ ರೂಪುಗೊಳ್ಳುವ, ಸಮಾಜದ ಬದುಕಿನೊಂದಿಗೆ ನಿಧಾನವಾಗಿ ವಿಕಾಸವಾಗುವ, ಒಂದು ಹೊಚ್ಚ ಹೊಸ ಕ್ರಾಂತಿ ಎಂದು ಭಾಸವಾಗದ, ಹೊರಗಿನಿಂದ ಹೇರಲ್ಪಡದ, ಅಲ್ಲಲ್ಲಿನ ಪರಿಸ್ಥಿತಿಗೆ ವಿಶಿಷ್ಟವಾಗಿ ಹೊಂದಿಕೊಳ್ಳುವ, ಆದುದರಿಂದ ಏಕಾಕಾರವಲ್ಲದ, ಇನ್ನೊಂದರೊಡನೆ ಹೋಲಿಸುವುದೇ ಅನಗತ್ಯವಾದ ದೇಶೀ ತಂತ್ರಜ್ಞಾನವನ್ನು ಗಾಂಧಿ ಆದರಿಸಿದರು. ಬಹುದೀರ್ಘ ಕಾಲದಿಂದ ಬಾಳಿ ಬದುಕಿ ಬಂದ ಸಂಸ್ಕೃತಿ ಇದು ಎನ್ನುವ ಅರಿವು ಇದ್ದಕಿದ್ದಂತೆ ಎಲ್ಲವನ್ನೂ ಭೇದಿಸಿ, ಯಾವುದನ್ನೂ ಲೆಕ್ಕಿಸದೆ ಮುನ್ನುಗ್ಗಬೇಕೆನ್ನುವ ಧಾವಂತವನ್ನು ನಮ್ಮದು **Brave new world** ಎನ್ನುವ ಘೋಷಣೆಯನ್ನು ಸುಲಭದಲ್ಲಿ ಒಪ್ಪಲಾರದು. ದಾಪುಗಾಲಿಟ್ಟು ಮುನ್ನುಗ್ಗುವ ಆಕ್ರಮಣಕಾರಿ ಧಾವಂತಕ್ಕೆ ಪ್ರತಿಯಾಗಿ **One step is enough for me** ಸಾಕು ನನಗೊಂದು ಹೆಜ್ಜೆ ಎಂಬ ನುಡಿಗಟ್ಟನ್ನು ಗಾಂಧಿ ಜನಪ್ರಿಯಗೊಳಿಸಿದರು. ಇದು ಅವರ ಹೃದಯವನ್ನು ಸೂಚಿಸುತ್ತದೆ. ಅವರದು ಎಲ್ಲರೊಡನೆ ಸಾಗುವ ಪಾದಯಾತ್ರೆ. ಎಲ್ಲರ ಹೆಜ್ಜೆ ಗುರುತುಗಳು ಪಡಿಮೂಡುವ ದಾರಿ. ಜನ ಧೂಳಿಯ ದಾರಿ. ಗೋಧೂಳಿಯ ದಾರಿ.

ಗಾಂಧೀಜಿಗೆ ಪ್ರಿಯವಾದ ಭಗವದ್ಗೀತೆಯಲ್ಲಿ 'ಸ್ವಧರ್ಮ–ಪರಧರ್ಮ' ಎನ್ನುವ ಮಾತುಗಳು ಬರುತ್ತವೆ. 'ಸ್ವ ಧರ್ಮ' ಎಂದಾಗ ತನಗೆ ಸಹಜವಾದ, ತನ್ನ ಸ್ವಾಭಾವಕ್ಕೆ ಹೊಂದುವ, ಎಲ್ಲೂ ತನಗೆ ಪರಕೀಯವೆಂದು ಅನ್ನಿಸದ, ಆಚರಿಸದೇ ಇರಲು ಸಾಧ್ಯವೇ ಇಲ್ಲ ಎನ್ನುವಷ್ಟು ಆತ್ಮೀಯವಾದ ಧರ್ಮ– ಎನ್ನುವ ಅರ್ಥಗಳೆಲ್ಲ ಹೊಮ್ಮುತ್ತವೆ. ಬಹಳ ಚೆನ್ನಾಗಿ ಅನುಷ್ಠಾನ ಮಾಡಿದ 'ಪರಧರ್ಮ'ಕ್ಕಿಂತಲೂ ಕಾರಣಾಂತರಗಳಿಂದ ಅಷ್ಟು ಚೆನ್ನಾಗಿ ಅನುಷ್ಠಾನ ಮಾಡಲಾಗದೇ ಇದ್ದ 'ಸ್ವಧರ್ಮ'ವೇ ಶ್ರೇಯಸ್ಕರ ಎಂಬ ತುಂಬ ಮಾರ್ಮಿಕವಾದ ಒಂದು ಮಾತೂ ಗೀತೆಯಲ್ಲಿದೆ. ಗಾಂಧೀಜಿ; ಈ 'ಸ್ವಧರ್ಮ' ಎಂಬ ಪರಿಕಲ್ಪನೆಯನ್ನು 'ಸ್ವ–ದೇಶಿ'ಯಾಗಿಸಿದರು. ಇದು ವಿವೇಕಾನಂದರ ವಿಶ್ವದೃಷ್ಟಿಗಿಂತ ತುಸು ಬೇರೆಯಾದಂತೆ ಕಂಡುಬಂದರೂ ಈ 'ಸ್ವದೇಶಿ'ಯಲ್ಲೂ ಒಂದು ವಿಶ್ವದೃಷ್ಟಿ ಇದ್ದೇ ಇದೆ. ಅದೇನೆಂದರೆ– ನಿಮ್ಮ ನಿಮ್ಮ 'ಸ್ವದೇಶಿ'ಯನ್ನೂ 'ಸ್ವಧರ್ಮ'ವನ್ನೂ ನೀವೇ ಕಂಡರಿಸಿಕೊಳ್ಳಬೇಕಾಗಿದೆ ಎಂಬ ವಿಶ್ವ ಸಂದೇಶ!

ಗಾಂಧೀಜಿಯವರ ಆತ್ಮಕಥೆಯನ್ನೇ ನೋಡಿ. ಅದಕ್ಕೆ ಅವರಿಟ್ಟ ಹೆಸರು– ಸತ್ಯದ ಜೊತೆಗೆ ಪ್ರಯೋಗ **My experiment with truth** ಎಂದು. ಈ ಹೆಸರೇ ಗಾಂಧೀಜಿಯವರ ಸ್ವನಿಷ್ಠ ವಿಜ್ಞಾನಿಯ ಮನೋಧರ್ಮವನ್ನು ಸೂಚಿಸುತ್ತದೆ. ಈ ಹೆಸರಿನ ಗಹನತೆಯನ್ನು ಮನಗಾಣದೆ ಶಂಬಾಜೋಷಿಯವರಂಥ ಕನ್ನಡದ ಹಿರಿಯರು ಪುಸ್ತಕದ ಶಿರೋನಾಮೆಯ ಕುರಿತೇ– ಸತ್ಯದ ಜೊತೆಗೆ ಪ್ರಯೋಗವೆಂದರೇನರ್ಥ? ಎಂಬ ಪ್ರಶ್ನೆಯನ್ನೆತ್ತಿ ತಕರಾರು ಮಾಡಿದ್ದುಂಟು. ಬಾಳೆನ್ನುವುದು ಒಂದ ಪ್ರಯೋಗವೂ ಅಲ್ಲವೆ? ಆಗಬೇಡವೆ? ಆಗುವುದು ಸಾಧ್ಯವಿಲ್ಲವೆ? ಪ್ರವಾಹ ಪತಿತವಾದಂತೆ ಬದುಕು ಸಾಗಬೇಕೆ? ಪರಕೀಯರಿಗೆ ಸೋತ ನಾವು ನಮ್ಮ ಸೋಲಿನ ಕಾರಣಗಳನ್ನು ನಮ್ಮ ವ್ಯಕ್ತಿತ್ವದಲ್ಲಿಯೇ ಅರಿತು ಆ ದುರ್ಬಲತೆಗಳನ್ನು ಕಳಚಿಕೊಳ್ಳಬೇಡವೆ? ನಮ್ಮ ದೌರ್ಬಲ್ಯಗಳನ್ನು ತಮ್ಮ ಗೆಲುವಿಗೆ ಬಳಸಿಕೊಂಡ ವಿರೋಧಿಗಳು ಕೂಡ ಇನ್ನೊಂದು ರೀತಿಯಲ್ಲಿ ದುರ್ಬಲರೇ. ಅವರು ತಂತ್ರಗಾರರಲ್ಲದೆ ತಮ್ಮ ದೌರ್ಬಲ್ಯಗಳನ್ನು ಗೆದ್ದು ಉನ್ನತ ವ್ಯಕ್ತಿಗಳಾಗಲಿಲ್ಲ. ಪ್ರಯೋಗವಿಲ್ಲದೆ ಉನ್ನತ ವ್ಯಕ್ತಿಗಳಾಗುವುದು ಸಾಧ್ಯವೂ ಇಲ್ಲ. ಅಂದರೆ ನಮ್ಮನ್ನು ಗೆದ್ದವರೆನ್ನುವ ಕಾರಣಕ್ಕೆ ಅವರು ನಮಗೆ ಮಾದರಿ ಆಗುವುದು ಸಾಧ್ಯವಿಲ್ಲ. ಅಂದಾಗ, ನಮಗೆ ನಾವೇ ಮಾದರಿಯಾಗಬೇಕಾಯಿತು. ನಮಗೆ ನಾವೇ ಮಾದರಿ ಆಗುವುದೆಂದರೆ, ಸ್ವಧರ್ಮವನ್ನು ನಾವು ಕಂಡುಕೊಂಡಂತೆ. ನಮ್ಮ ಸ್ವದೇಶಿಯನ್ನು ನಾವು ಕಂಡುಕೊಂಡಂತೆ ನಮ್ಮ ವಿಜ್ಞಾನವನ್ನೂ ನಾವು ಕಂಡುಕೊಂಡಂತೆ. 'ಸಾಕು ನನಗೊಂದು ಹೆಜ್ಜೆ' ಎನ್ನುವ ಮಾತನ್ನು ನೆನಪಿಸಿಕೊಂಡು ಹೇಳುವುದಾದರೆ– ನಮ್ಮ ಹೆಜ್ಜೆಯನ್ನೂ ಕಂಡುಕೊಂಡಂತೆ!

ಹೌದು– ಗಾಂಧಿಯ ಮಾರ್ಗ ಹೆಜ್ಜೆಯ ಮೇಲೆ ಹೆಜ್ಜೆಯನಿಟ್ಟು ಸಾಗುವ ಮಾರ್ಗ. ದೊಡ್ಡ ಉಲ್ಲಂಘನೆಯ ಮಾರ್ಗವಲ್ಲ. ಪಾತಾಳಕ್ಕೆ ಬಿಲತೋಡುವ, ಆಗಸಕ್ಕ ಏಣಿ ಮಾಡಗುವ ಮಾರ್ಗವಲ್ಲ. ತನಗೆ ಗೊತ್ತಿಲ್ಲದುದು– ರಹಸ್ಯವಾಗಿರುವುದು– ಈ ನಿಸರ್ಗದಲ್ಲಿ ಬಹಳ ಇದೆ; ಈಗ ಗೊತ್ತಿರುವುದು ಅತ್ಯಲ್ಪ ಎಂದು ಸಂವೇದನಾಶೀಲವಾಗಿ ತಿಳಿದ ಮಾರ್ಗ. ವೈಜ್ಞಾನಿಕವಾಗಿಯೇ ಹೇಳುವುದಿದ್ದರೆ, ಮನುಷ್ಯರ ಮೆದುಳಿನ ಸಾಮರ್ಥ್ಯದಲ್ಲಿ ನಾವೀಗ ಬಳಸಿಕೊಳ್ಳುತ್ತಿರುವುದು ನೂರರಲ್ಲಿ ಹತ್ತಂಶ ಮಾತ್ರ ಅಥವಾ ಅದಕ್ಕಿಂತಲೂ ಕಡಿಮೆ ಎನ್ನುತ್ತಾರೆ. ಇದನ್ನು ಬಹ್ವಂಶ ಎಲ್ಲ ಮನೋವಿಜ್ಞಾನಿಗಳೂ ಒಪ್ಪುತ್ತಾರೆ. ಅಂದರೇನಾಯಿತು? ನಮ್ಮದೇ ಶೇಕಡಾ ತೊಂಬತ್ತು ಭಾಗ ನಮಗೆ ಅಜ್ಞಾತವಾಯಿತು. ನಮ್ಮ ವ್ಯಕ್ತಿತ್ವವೇ ರಹಸ್ಯಮಯವಾಯಿತು. ಈ ಅಂಶವನ್ನು ವಿವರಿಸುವಲ್ಲಿ ಕಡಲಲ್ಲಿ ತೇಲಿಬರುತ್ತಿರುವ ಅಗಾಧಗಾತ್ರದ ಮಂಜುಗಡ್ಡೆಯ ಉದಾಹರಣೆಯನ್ನು ಕೊಡುತ್ತಾರೆ. **Tip of the iceberg** ಎನ್ನುತ್ತಾರೆ. ಮಂಜುಗಡ್ಡೆಯ ತುದಿ ಮಾತ್ರ ಕಾಣಿಸುತ್ತದೆ. ಅದರ ಅಗಾಧ ಒಡಲು ಕಡಲಲ್ಲಿ ಮುಳುಗಿದೆ. ಅದು ಕಾಣುವುದಿಲ್ಲ. 'ನೀರ ಮೇಲಕ್ಕೊಂದು ಮಡಿ– ಕೆಳಕ್ಕೇಳು ಮಂಜಿನ ಶಿಖರಿ.' ಇದರಂತೆ ನಮ್ಮ ವ್ಯಕ್ತಿತ್ವ, ಇದರಂತೆ ನಮ್ಮ ಪ್ರಜ್ಞೆ. ಕಾಣದ, ಅಜ್ಞಾತ ಭಾಗ ಬಹಳ ದೊಡ್ಡದಿದೆ. ಹೀಗಿರುವಲ್ಲಿ ಒಂದು ದೊಡ್ಡ ರಹಸ್ಯದ ಜತೆಗೇ ನಾವು ಬದುಕಿರುವಲ್ಲಿ, ಆ ರಹಸ್ಯವು ನಾವೇ ಆಗಿರುವಲ್ಲಿ, ಇಂಥದೊಂದು ಅರಿವಿನಿಂದ ನಾವು ಬಾಳುವುದಾದರೆ ಆ ಬಾಳು ವಿಜ್ಞಾನಕ್ಕೆ ವಿರೋಧಿ ಆಗುವುದು ಸಾಧ್ಯವೇ ಇಲ್ಲ. ರಹಸ್ಯವನ್ನು ತಿಳಿಯಬೇಕು ಎನ್ನುವುದೇ ವಿಜ್ಞಾನದ ದೃಷ್ಟಿಯಲ್ಲವೆ? ರಹಸ್ಯದ ಜೊತೆಗೆ ಬದುಕುವುದು ಅಧ್ಯಾತ್ಮವೂ ಅಲ್ಲವೆ?

■ ತೋಷ

## ಮಾತೇ ಮುತ್ತು

★ ಬೆಳಿಗ್ಗೆ ಬೇಗ ಎದ್ದು ರಾತ್ರಿ ಬೇಗ ಮಲಗುವವನು ಆರೋಗ್ಯವಂತ, ಐಶ್ವರ್ಯವಂತ ಮತ್ತು ಬುದ್ಧಿವಂತನೂ ಆಗುತ್ತಾನೆ

–ಬೆಂಜಮಿನ್ ಫ್ರಾಂಕ್ಲಿನ್

★ ಜಗತ್ತಿನ ಅರ್ಧದಷ್ಟು ಜನರಿಗೆ ಉಳಿದರ್ಧ ಜನರ ಸಂತೋಷಗಳು ಅರ್ಥವಾಗುವುದೇ ಇಲ್ಲ.

–ಜೇನ್ ಆಸ್ಟಿನ್

★ ನಾನು ವಾಚಾಳಿಗಳಿಂದ ಮೌನ ಕಲಿತೆ; ಅಸಹಿಷ್ಣುಗಳಿಂದ ಸಹಿಷ್ಣುತೆ ಕಲಿತೆ; ಕ್ರೂರಿಗಳಿಂದ ದಯೆಯನ್ನು ಕಲಿತೆ. ಆದರೆ ಈ ಯಾವ ಶಿಕ್ಷಕರಿಗೂ ನಾನು ಕೃತಜ್ಞನಾಗಿಲ್ಲ.

–ಖಲೀಲ್ ಗಿಬ್ರಾನ್

★ ಜನರನ್ನು ಆಳುವುದು ಕಷ್ಟ; ಏಕೆಂದರೆ ಅವರಿಗೆ ಅತಿಯಾದ ಜ್ಞಾನವಿದೆ.

–ಲಾವೊ ತ್ಸು

★ ಸಮಯವನ್ನು ನಾವು ಪಾಲಿಸಿದರೆ ಅದು ನಮಗೆ ವಿಧೇಯವಾಗಿರುತ್ತದೆ.

–ಸರ್.ಎಂ.ವಿಶ್ವೇಶ್ವರಯ್ಯ